

ಕೂದಲು ಸೌಂದರ್ಯದ ಸಂಕೇತ. ಮಹಿಳೆಯರಿಗಂತೂ ಕೂದಲು ಸೊಂಪಾಗಿದ್ದಷ್ಟೂ ಹಿಗ್ಗು. ಸೌಭಾಗ್ಯದ ರೂಪದಲ್ಲಿ ಕೇಶರಾಶಿಯನ್ನು ನೋಡುವ ಹೆಣ್ಣುಮಕ್ಕಳೂ ಇದ್ದಾರೆ. ಹೀಗೆ, ಕೂದಲಿನ ಬಗ್ಗೆ ರೂಪುಗೊಂಡಿರುವ ಭಾವಲೋಕದ ಜೊತೆಯಲ್ಲೇ ಕ್ಯಾನ್ಸರ್ ಬಾಧೆಗೊಳಗಾದವರು ಚಿಕಿತ್ಸೆಯ ಸಂದರ್ಭದಲ್ಲಿ ಕೂದಲು ಕಳೆದುಕೊಳ್ಳುವ ನೋವನ್ನು ಗಮನಿಸಬೇಕಾಗಿದೆ. ರೋಗಬಾಧೆಯೊಂದಿಗೆ ಬೋಳುತಲೆಯ ಸಂಕಟವೂ ಜೊತೆಗೂಡುತ್ತದೆ. ಕ್ಯಾನ್ಸರ್ ಚಿಕಿತ್ಸೆಯಿಂದಾಗಿ ಕೂದಲು ಕಳೆದುಕೊಳ್ಳುವ ಮಹಿಳೆಯರಿಗಾಗಿ ತಯಾರಿಸುವ ವಿಗ್‌ಗಳಿಗಾಗಿ ‘ಕೇಶದಾನ’ ಮಾಡುವ ಆಂದೋಲನವೊಂದು ನಮ್ಮ ನಡುವೆ ಸದ್ದಿಲ್ಲದೆ ಪ್ರಾರಂಭವಾಗಿದೆ. ಜನಸಾಮಾನ್ಯರೊಂದಿಗೆ ಸೆಲೆಬ್ರಿಟಿಗಳೂ ಈ ಆಂದೋಲನದ ಭಾಗವಾಗಿದ್ದಾರೆ. ‘ಅಳಲು ತೊಡೆಯುವ ಕೂದಲು’ ಕಥನವನ್ನು ‘ಸುಧಾ’ ಕಾಳಜಿಯಿಂದ ಸಹೃದಯರ ಮುಂದಿಡುತ್ತಿದೆ.

■ ಉಮಾ ಅನಂತ್